# ಆರಂಭವಾಗಿ ಹತ್ತೇ ದಿನಕ್ಕೆ ಲೌಕ್‌ಡೌನ್!

**ರೋಹಿತ್ ರಂಗಸ್ವಾಮಿ**
ಸ್ಟಾರ್ ಸುವರ್ಣ
'ಸಂಘರ್ಷ'ದ ರಾಜ



**◆ ಮಾಸ್ಕ್ ಧರಿಸಿ ಪ್ರೇಮಿಯ ಸ್ಪರ್ಶವಿಲ್ಲದೆ ನಟಿಸುವುದು ಭಾವಾಭಿವ್ಯಕ್ತಿಗೆ ಅಡ್ಡಿ ಅನ್ನಿಸುತ್ತಿದೆಯೇ?**

ಸರ್ಕಾರವೇ ಕೆಲವು ನಿಯಮಗಳನ್ನು ರೂಪಿಸಿದೆ. ಅದನ್ನು ಪಾಲಿಸಿಕೊಂಡೇ ನಾವು ಚಿತ್ರೀಕರಣ ಮಾಡುತ್ತಿದ್ದೇವೆ. ಸ್ಕ್ರೀನ್ ಮುಂದೆ ಬರಬೇಕು ಅಂದರೆ ನಾವು ನಮ್ಮ ವ್ಯಕ್ತಿತ್ವದಿಂದ ವಿಮೋಚಿತರಾಗಿ ಮತ್ತೊಂದು ವ್ಯಕ್ತಿತ್ವವಾಗಿ ಹೊರಹೊಮ್ಮಿರುತ್ತೇವೆ. ನಿಯಾಮವಳಿಯಂತೆ ಸ್ಪರ್ಶ ಇರಲ್ಲ. ಇಂಟಿಮೇಟ್ ಸೀನ್ ಇರಲ್ಲ. ಎಲ್ಲದನ್ನೂ ನಮ್ಮ ದೇಹಭಾಷೆ ಮತ್ತು ಪ್ರತಿಕ್ರಿಯೆಯ ಮೂಲಕವೇ ತೋರಿಸಬೇಕಾಗುತ್ತದೆ. ಎಲ್ಲೋ ಒಮ್ಮೆ ಕೈ ಹಿಡಿಯುವ ಸಂದರ್ಭ ಬರಬಹುದು. ಅದಕ್ಕೂ ಮುಂಜಾಗ್ರತೆಯನ್ನು ತೆಗೆದುಕೊಳ್ಳುತ್ತೇವೆ. ಭಯಾನಕ ವಾತಾವರಣ ಇರುವುದರಿಂದ ನಮಗಿರುವ ಪರಿಮಿತಿಯೊಳಗೆ ಕಥೆಯನ್ನು ಕಟ್ಟಿಕೊಡಬೇಕು.

**◆ ಸಂಘರ್ಷ ಧಾರಾವಾಹಿ ಮತ್ತು ಸಿನಿಮಾ ನಡುವೆ ಏನಾದರೂ ಸಂಬಂಧ ಇದೆ ಎಂದೆನಿಸುತ್ತದೆಯೇ?**

ಇದೇ ಹೆಸರಿನ ಸಿನಿಮಾಕ್ಕೂ ಈ ಧಾರಾವಾಹಿಗೂ ಯಾವುದೇ ಸಂಬಂಧ ಇಲ್ಲ. ಇದರ ಕಥೆ ಕೇಳಿದಾಗ ಸಿನಿಮಾ ಕಥೆಯೇ ಇದ್ದಂತಿದೆ ಎಂದು ನನಗೆ ಅನ್ನಿಸಿದ್ದು ಸುಳ್ಳಲ್ಲ. ಈ ರೀತಿಯ ಕಥಾ ಹಂದರವುಳ್ಳ ಅನೇಕ ಸಿನಿಮಾಗಳನ್ನು ನೋಡಿದ್ದೇನೆ ಎಂದೂ ನನಗೆ ಭಾಸವಾಗಿತ್ತು. ಇಲ್ಲಿನ ಕಥೆಯ ಎಳೆ ನೋಡಿದಾಗ ಸಿನಿಮೀಯ ಟಚ್ ಇದೆ ಎಂದು ಅನ್ನಿಸಿತ್ತು. ಹಾಗೆಯೇ ಕಥೆ ನಿರೂಪಣೆಯಾಗುತ್ತಿದೆ. ಅದನ್ನು ಅದ್ದೂರಿಯಾಗಿಯೇ ಅನಾವರಣ ಮಾಡಲಾಗುತ್ತಿದೆ.

**◆ ಅಮ್ಮ ಬೈರಾದೇವಿಗೆ ಹೇಗೆ ಮುಖಾಮುಖಿ ಆಗುತ್ತೀರಿ?**

ಈಗ ಸದ್ಯದಲ್ಲಿ ಅಂತಹ ಸನ್ನಿವೇಶ ಇಲ್ಲ. ನಮ್ಮ ಕುಟುಂಬದಲ್ಲಿ ನಾನೇ ಅತ್ಯಂತ ಮುದ್ದಿನ ಮಗ. ಅಮ್ಮನ ಬಗ್ಗೆ ನನಗೂ ಬೆಟ್ಟದಷ್ಟು ಪ್ರೀತಿ ಇದೆ. ಜಿಲ್ಲಾಧಿಕಾರಿ ಇಂದಿರಾ ನಡುವೆ ಪ್ರೇಮಾಂಕುರವಾಗಿದೆ. ಪ್ರೀತಿಸುತ್ತೇನೆ ಎನ್ನುವುದು ಅಮ್ಮನಿಗೂ ಗೊತ್ತಾಗುತ್ತದೆ. ನಾನು ಮದುವೆಯಾಗಲು ನಮ್ಮ ತಾಯಿಯನ್ನು ಒಪ್ಪಿಸಲೇಬೇಕು. ಅಮ್ಮ ಗೌಡ್ತಿ ಆಕೆಗೂ ಊರಿಗೆ ಒಳಿತಾಗಬೇಕು ಎನ್ನುವ ಆಸೆ ಇದ್ದರೂ ತನ್ನ ಹಿಡಿತದಲ್ಲಿ ಅದಿರಬೇಕು ಎಂದು ಬಯಸುತ್ತಾಳೆ. ಜಿಲ್ಲಾಧಿಕಾರಿ ಕಾನೂನು ಬದ್ಧವಾಗಿ ಪ್ರಜಾಸತ್ತಾತ್ಮಕವಾಗಿ ಸುಧಾರಣೆಯಾಗಬೇಕು. ಗ್ರಾಮೋದ್ಧಾರಕ್ಕೆ ತಮ್ಮ ಸೇವೆಯನ್ನು ಮುಡಿಪಾಗಿ ಇಟ್ಟಿದ್ದಾರೆ. ಇದು ಅವರಿಬ್ಬರ ಅಹಮ್ಮಿಕೆಯನ್ನು ಅಲ್ಲಾಡಿಸಿದೆ. ನಾನು ಆ ಎರಡೂ ನಿಭಾಯಿಸಿಕೊಂಡು ಹೋಗುತ್ತಿರುತ್ತೇನೆ. ಅದರಿಂದ ಆಗುವ ತಪ್ಪು ಗೋಚರಿಸಿ ಅನ್ಯಾಯ ಆದ ಕುಟುಂಬಕ್ಕೆ ಅನುಕೂಲವಾಗಬೇಕು ಎಂದು ಬಯಸುತ್ತೇನೆ. ಮುಂದೆ ತಾಯಿಯ ವಿರುದ್ಧವೂ ನಿಲ್ಲುವ ಎಲ್ಲ ಸಾಧ್ಯತೆ ಇದೆ ಎಂದು ಭಾವಿಸಿದ್ದೇನೆ.

**◆ ನಟನೆ ವೃತ್ತಿಯಾದ ಹಿನ್ನೆಲೆಯನ್ನು ಹೇಳಿ...**

ಬಣ್ಣ ಹಚ್ಚಿ ಐದು ವರ್ಷ ಆಯ್ತು. ಕಾಲೇಜು ದಿನಗಳಲ್ಲಿಯೇ ನೌಕರಿ ಮಾಡುವುದಕ್ಕಿಂತ ನಟ ಆಗಬೇಕು ಎಂದು ಭಾವಿಸಿದ್ದೆ. ನಟನೆ ಬಗ್ಗೆ ಹೇಗೋ ಪ್ರೀತಿ ಮೂಡಿತ್ತು. ನಮ್ಮ ಸಂಬಂಧಿ ನಾರಾಯಣ ಗೌಡ್ರು ಸೌಂಡ್ ಎಂಜಿನಿಯರ್ ಆಗಿ ಮಾಧ್ಯಮದಲ್ಲಿಯೇ ಕೆಲಸ ಮಾಡುತ್ತಾರೆ. ಅವರು ಒಮ್ಮೆ ಅಭಿನಯ ಮಾಡುತ್ತಿಯಾ ಎಂದು ಕೇಳಿದರು. ಹುಂ, ಮಾಡ್ತೀನಿ ಅಂದೆ. ಕಾಲೇಜು ಮುಗಿದ ತಕ್ಷಣ ಉಷಾ ಭಂಡಾರಿಯವರ ನಟನೆ ತರಬೇತಿ ಶಾಲೆಗೆ ಸೇರಿ ಒಂದು ಕೋರ್ಸ್ ಮಾಡಿದೆ. ನಂತರ ಆಡಿಷನ್ ನೀಡಲು ಶುರುಮಾಡಿದೆ. ಮೊದಲು ಸ್ಟಾರ್‌ಸುವರ್ಣದಲ್ಲಿಯೇ 'ಶ್ರೀಮತಿ ಭಾಗ್ಯಲಕ್ಷ್ಮಿ'ಯಲ್ಲಿ ಪಾತ್ರ ಮಾಡಿದೆ. ನೆಗೆಟಿವ್ ಪಾತ್ರ ಅದಾಗಿತ್ತು ದೊಡ್ಡ ಮಟ್ಟಕ್ಕೆ ಹೆಸರು ಕೊಡಲಿಲ್ಲ. ಮತ್ತೆ ಕೆಲವು ಪಾತ್ರಗಳು ಸಿಕ್ಕವು. ಆಮೇಲೆ 'ಬಂಗಾರಿ'ಯಲ್ಲಿ ನಾಯಕನಾದೆ. 'ಲಕ್ಷ್ಮಿ ಬಾರಮ್ಮ'ದಲ್ಲಿ ವಿಲನ್ ಆಗಿದ್ದೆ. ಮುಂದಿನ ಅವಕಾಶದ ಹುಡುಕಾಟದಲ್ಲಿ ಇದ್ದಾಗ ಇದು ಸಿಕ್ಕಿದೆ. ನಾನು ನಟನಾಗಿಯೇ ಬೆಳೆಯುತ್ತೇನೆ. ಸಿನಿಮಾ ಮಾಡುತ್ತೇನೆ ಸಮಯ ನಡೆಸಿದಂತೆ ಸಾಗುತ್ತೇನೆ.

**◆ ಲಾಕ್‌ಡೌನ್ ಅವಧಿಯಲ್ಲಿ ನಿಮ್ಮ ಕನಸು ಹೇಗೆ ಕಾಡಿದವು...**

ಆರು ತಿಂಗಳು ಕೆಲಸ ಇರಲಿಲ್ಲ. ಒಳ್ಳೆಯ ಅವಕಾಶಕ್ಕಾಗಿಯೇ ಹುಡುಕುತ್ತಿದ್ದೆ. ನನ್ನ ಸಿನಿಮಾ ಕೆಲಸಗಳು ಮುಗಿದಿದ್ದವು. ಇದು ಸಿಕ್ಕಿತು ತುಂಬ ಚೆನ್ನಾಗಿದೆ ಎಂದು ಒಪ್ಪಿಕೊಂಡೆ. ಶೂಟಿಂಗ್ ಆರಂಭವಾಗಿ ಹತ್ತೇ ದಿನಕ್ಕೆ ಲಾಕ್‌ಡೌನ್ ಜಾರಿಯಾಯಿತು. ಒಂದೆರಡು ವಾರ ಆರಾಮಾಗಿದ್ದೆ, ತುಂಬ ಕನಸು ಹೊತ್ತು ಪಾತ್ರ ಮಾಡುವಾಗ ದಿಡೀರ್ ಎದುರಾದ ಈ ಸಮಸ್ಯೆ ಮಾನಸಿಕವಾಗಿ ಚಿಂತೆಗೆ ಎಡೆ ಮಾಡಿತ್ತು. ಆದರೂ ಮುಂದೆ ಆರಂಭವಾಗುತ್ತೆ ಎನ್ನುವ ಭರವಸೆ ನನಗಿತ್ತು. ಹಾಗಾಗಿ ಸೀರಿಯಲ್‌ಗೆ ತಯಾರಿ ಆಗುತ್ತಿದ್ದೆ. ವರ್ಕೌಟ್ ಮಾಡುವ ಜೊತೆ ಸಿನಿಮಾಗಳನ್ನು ನೋಡುತ್ತಿದ್ದೆ. ಪಾತ್ರಕ್ಕೆ ಸ್ವಲ್ಪ ತೂಕ ಇಳಿಸಬೇಕಿತ್ತು. ಡಯಟ್ ಮಾಡದೆ ಒಂದೂವರೆ ತಿಂಗಳಲ್ಲಿ ಹತ್ತು ಕೇಜಿ ತೂಕ ಇಳಿಸಿದ್ದೆ. ನಿರೀಕ್ಷೆಯಂತೆ ಮತ್ತೆ ಚಿತ್ರೀಕರಣ ಆರಂಭವಾಗಿರುವುದು ಖುಷಿ ಆಯ್ತು. ಆದರೆ ಕೆಲವು ಧಾರಾವಾಹಿಗಳು ನಿಂತು ಹಲವರು ಕೆಲಸವನ್ನು ಕಳೆದುಕೊಂಡರು ಎನ್ನುವ ಬೇಸರವೂ ಇದೆ.

■ **ರಾಘವೇಂದ್ರ ಕೆ.**